Dr. B.B. HEGDE FIRST GRADE COLLEGE, KUNDAPURA

# Department of Physical education

## Under the guidance of Internal Quality Assurance Cell

## Report

| | |
|---|---|
| Name of the Activity | Felicitation to Prize winners at Inter- University Inter – Collegiate Sports Events and Inter-Class Sports Champions of 2022-23 |
| Type of the Activity | Sports & Games |
| Date | 01/07/2023 |
| Chief Guest/ Resource Person | Dr. Ramesh H. N.<br>Special Officer (Registrar Evaluation), Mangalore University |
| Number of Participation | 1512 |
| Target Group | College Men and Women Students |
| Objective | • To engage the student in sports activities<br>• To exhibit their talent in sports and games<br>• To promote the spirit of sportsmanship |
| Outcome | • Sportsmen of our College were felicitated in various sports Events in Mangalore University<br>• Inter-Collegiate Sports Events Prize Winners Felicitation<br>• The volunteers have taken a lead role in the conducting of Annual Games Fest |
| Highlights | • The event attend by B.Com., B.C.A, B.Sc. & B.B.A students of our College<br>• The College & Department was able to successfully organized the event with Complete support with the Management Principal Staff & students |
| Lecture in-charge | Mr. Ranjith T. N. Physical Education Director |

Principal
*Principal*
Dr. B.B. Hegde First Grade College
Kundapura -576201

Physical Education Director
PHYSICAL DIRECTOR
Dr. B. B. Hegde First Grade College
Kundapura

Scanned with OKEN Scanner










PRINCIPAL
Dr. B. B. Hegde First Grade College
...ndapura

Scanned with OKEN Scanner

# ಡಾ। ಬಿ. ಬಿ. ಹೆಗ್ಡೆ ಕಾಲೇಜು, ಕುಂದಾಪುರ

## ಕ್ರೀಡಾ ಹಬ್ಬ



ಕುಂದಾಪುರ (ಜುಲೈ 01) : ಪ್ರತಿಯೊಬ್ಬ ಸಾಧಕನ ಪ್ರಯತ್ನದ ಹಿಂದೆಯೂ ಕ್ರಿಯಾಶೀಲತೆ ಹಾಗೂ ಪ್ರಯತ್ನಗಳು ಇರುತ್ತದೆ. ಇದಕ್ಕೆ ಕ್ರೀಡೆಯೂ ಹೊರತಾಗಿಲ್ಲ. ಶಾರೀರಿಕ ಹಾಗೂ ಮಾನಸಿಕ ಸಮತೋಲನ ಕಾಪಾಡುವ ಕ್ರೀಡೆ ಬದುಕಿನಲ್ಲಿ ಜೀವನೋತ್ಸಾಹ ತುಂಬುತ್ತದೆ ಎಂದು ಮಂಗಳೂರು ವಿಶ್ವವಿದ್ಯಾನಿಲಯದ ಪರೀಕ್ಷಾಂಗ ವಿಭಾಗದ ವಿಶೇಷ ಅಧಿಕಾರಿ ಡಾ। ರಮೇಶ್ ಹೆಚ್.ಎನ್. ಹೇಳಿದರು.

ಇವರು ಡಾ। ಬಿ. ಬಿ. ಹೆಗ್ಡೆ ಕಾಲೇಜಿನಲ್ಲಿ ನಡೆದ ವಾರ್ಷಿಕ ಕ್ರೀಡಾ ಹಬ್ಬ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ಮುಖ್ಯ ಅತಿಥಿಯಾಗಿ ಆಗಮಿಸಿದ ಮೂಡುಬಿದಿರೆ ಆಳ್ವಾಸ್ ಕಾಲೇಜಿನ ದೈಹಿಕ ಶಿಕ್ಷಣ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಮಧು ಜಿ. ಆರ್. ಇವರು ಮಾತನಾಡಿ, ಕ್ಷಣ ಕ್ಷಣಕ್ಕೂ ಬದಲಾವಣೆಯನ್ನು ಕಾಣುವ ವೈಜ್ಞಾನಿಕ ಯುಗದಲ್ಲಿ ಇರುವ ವಿದ್ಯಾರ್ಥಿಗಳು ನಿರ್ದಿಷ್ಟ ಗುರಿಯೊಂದಿಗೆ ಪರ್ಯಾಯ ಆಯ್ಕೆಯನ್ನು ಮುಕ್ತವಾಗಿರಿಸಿಕೊಳ್ಳಬೇಕು. ಮಕ್ಕಳ ಮನಸ್ಥಿತಿಗೆ ಪೂರಕವಾಗಿ ಹೆತ್ತವರು ಪ್ರತಿಸ್ಪಂದಿಸಬೇಕು. ಇತ್ತೀಚಿನ ದಿನಗಳಲ್ಲಿ ಪೋಷಕರು ಮಕ್ಕಳನ್ನು ಓದಿಗಾಗಿ ಪ್ರೇರೇಪಿಸುತ್ತಿರುವುದರಿಂದಾಗಿ ಮಕ್ಕಳಲ್ಲಿ ಕ್ರೀಡಾಸಕ್ತಿ ಕಡಿಮೆಯಾಗುತ್ತಿದೆ. ಓದಿನ ಜೊತೆಯಲ್ಲಿ ಕ್ರೀಡೆ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲಿಯೂ ವಿದ್ಯಾರ್ಥಿಗಳು ತೊಡಗಿಸಿಕೊಂಡಾಗ ಮಾತ್ರ ಪರಿಪೂರ್ಣ ವಿದ್ಯಾರ್ಥಿಯಾಗಿ ಹೊರಹೊಮ್ಮಲು ಸಾಧ್ಯವಾಗುತ್ತದೆ ಎಂದರು. ಕುಂದಾಪುರ ಎಜುಕೇಶನ್ ಸೊಸೈಟಿಯ ಕಾರ್ಯದರ್ಶಿಗಳಾದ ಶ್ರೀ ಕೆ. ಸೀತಾರಾಮ ನಕ್ಕತ್ತಾಯ ಇವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದರು. ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ರಂಜಿತ್ ಟಿ. ಎನ್. ಉಪಸ್ಥಿತರಿದ್ದರು.

ಕಾಲೇಜಿನ ಪ್ರಾಂಶುಪಾಲರಾದ ಪ್ರೊ। ಕೆ. ಉಮೇಶ್ ಶೆಟ್ಟಿ ಪ್ರಾಸ್ತಾವಿಸಿದರು. ಉಪ ಪ್ರಾಂಶುಪಾಲರಾದ ಶ್ರೀ ಚೇತನ್ ಶೆಟ್ಟಿ ಕೋವಾಡಿ ಸ್ವಾಗತಿಸಿದರು. ವಾಣಿಜ್ಯ ಉಪನ್ಯಾಸಕ ಶ್ರೀ ಸತೀಶ್ ಶೆಟ್ಟಿ ಹೆಸ್ಕತ್ತೂರು ಅಂತರ್ – ತರಗತಿ ಕ್ರೀಡಾ ಪಂದ್ಯಾಟದ ಬಹುಮಾನ ವಿಜೇತರ ಪಟ್ಟಿಯನ್ನು ವಾಚಿಸಿದರು. ನಿರ್ವಹಣಾ ವಿಭಾಗದ ಉಪನ್ಯಾಸಕಿ ಶ್ರೀಮತಿ ಅವಿತಾ ಕೊರೆಯಾ ನಿರೂಪಿಸಿ, ವಂದಿಸಿದರು. ವಿದ್ಯಾರ್ಥಿನಿ ಪವಿತ್ರಾ ಪೈ ಪ್ರಾರ್ಥಿಸಿದರು.

Principal
Dr. B.B. Hegde First Grade College
Kundapura -576201

Scanned with OKEN Scanner

# ಡಾ। ಬಿ. ಬಿ. ಹೆಗ್ಡೆ ಕಾಲೇಜು, ಕುಂದಾಪುರ
## ಕ್ರೀಡಾ ಸಾಧಕರಿಗೆ ಸನ್ಮಾನ



ಕುಂದಾಪುರ (ಜುಲೈ 01) : ಮಂಗಳೂರು ವಿಶ್ವವಿದ್ಯಾನಿಲಯ, ಅಂತರ್ ಕಾಲೇಜು ಮತ್ತು ಕಾಲೇಜು ಮಟ್ಟದಲ್ಲಿ ಕ್ರೀಡಾ ಸಾಧನೆಗೈದ ವಿದ್ಯಾರ್ಥಿಗಳಾದ ಸಾಫ್ಟ್‌ಬಾಲ್‌ನಲ್ಲಿ ತೃತೀಯ ಬಿ.ಕಾಂ. 'ಎ' ವಿಭಾಗದ ನಿಸರ್ಗ ಖಾರ್ವಿ, ದ್ವಿತೀಯ ಬಿ.ಕಾಂ. 'ಸಿ' ವಿಭಾಗದ ರೋಹನ್ ಪೂಜಾರಿ, ದ್ವಿತೀಯ ಬಿ.ಕಾಂ. 'ಎ' ವಿಭಾಗದ ಲೋಕೇಶ್, ಪ್ರಥಮ ಬಿ.ಬಿ.ಎ.ನ ದಿನಕರ್, ಪ್ರಥಮ ಬಿ.ಎಸ್ಸಿ. ಡೇವಿಡ್, ಪ್ರಥಮ ಬಿ.ಕಾಂ. 'ಸಿ' ವಿಭಾಗದ ಅಮಿತ್‌ರಾಜ್, ಪ್ರಥಮ ಬಿ.ಬಿ.ಎ. ನ ರಕ್ಷಕ್, ಚೆಸ್‌ನಲ್ಲಿ ತೃತೀಯ ಬಿ.ಎಸ್ಸಿ. ವಿಶಾಲ್, ದ್ವಿತೀಯ ಬಿ.ಸಿ.ಎ.ನ ದಿವ್ಯಾ, ಪ್ರಥಮ ಬಿ.ಬಿ.ಎ. ನ ಕಿರಣ್ ಮೊಗವೀರ, ಚರಣ್ ಶೆಟ್ಟಿ, ಕರಾಟೆಯಲ್ಲಿ ದ್ವಿತೀಯ ಬಿ.ಕಾಂ. 'ಎ' ವಿಭಾಗದ ಪ್ರಜ್ವಲ್ ಶೆಟ್ಟಿ, ಸಚಿನ್ ದೇವಾಡಿಗ, ದ್ವಿತೀಯ ಬಿ.ಕಾಂ.ನ ನವ್ಯಾ, ಪವರ್ ಲಿಫ್ಟಿಂಗ್‌ನಲ್ಲಿ ದ್ವಿತೀಯ ಬಿ.ಕಾಂ. 'ಸಿ' ವಿಭಾಗದ ವರುಣ್ ಇವರನ್ನು ವಾರ್ಷಿಕ ಕ್ರೀಡಾ ಹಬ್ಬ ಸಮಾರಂಭದಲ್ಲಿ ಪುರಸ್ಕರಿಸಲಾಯಿತು.

ಈ ಸಂದರ್ಭದಲ್ಲಿ ಕುಂದಾಪುರ ಎಜುಕೇಶನ್ ಸೊಸೈಟಿಯ ಕಾರ್ಯದರ್ಶಿಗಳಾದ ಶ್ರೀ ಕೆ. ಸೀತಾರಾಮ ನಕ್ಕತ್ತಾಯ, ಮಂಗಳೂರು ವಿಶ್ವವಿದ್ಯಾನಿಲಯದ ಪರೀಕ್ಷಾಂಗ ವಿಭಾಗದ ವಿಶೇಷ ಅಧಿಕಾರಿ ಡಾ। ರಮೇಶ್ ಹೆಚ್.ಎನ್., ಮೂಡುಬಿದಿರೆ ಆಳ್ವಾಸ್ ಕಾಲೇಜಿನ ದೈಹಿಕ ಶಿಕ್ಷಣ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಮಧು ಜಿ. ಆರ್., ಕಾಲೇಜಿನ ಪ್ರಾಂಶುಪಾಲರಾದ ಪ್ರೊ। ಕೆ. ಉಮೇಶ್ ಶೆಟ್ಟಿ, ಉಪ ಪ್ರಾಂಶುಪಾಲರಾದ ಶ್ರೀ ಚೇತನ್ ಶೆಟ್ಟಿ ಕೋವಾಡಿ, ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ರಂಜಿತ್ ಟಿ. ಎನ್. ಉಪಸ್ಥಿತರಿದ್ದರು.

Principal
Dr. B.B. Hegde First Grade College
Kundapura -576201

Scanned with OKEN Scanner